

ಅಪ್ಪ ಒಮ್ಮೆಯಾದರೂ ನಮ್ಮನ್ನು ಎತ್ತಿ ಆಡಿಸಿದ್ದಾಗಲಿ, ಮುದ್ದು ಮಾಡಿದ್ದಾಗಲಿ, ನಮ್ಮೊಂದಿಗಾಗಲಿ, ಅವ್ವನೊಂದಿಗಾಗಲಿ ಕುಂತು ಮಾತನಾಡಿದ್ದಾಗಲಿ ನೆನಪೇ ಇಲ್ಲ. ಜೊತೆಯಲ್ಲಿ ಕುಂತು ಉಂಡಿದ್ದಾಗಲಿ, ನಕ್ಕಿದ್ದಾಗಲಿ ಕಡೇಪಕ್ಷ ಪ್ರೀತಿಯಿಂದ ನೋಡಿಕೊಂಡದ್ದಾಗಲಿ ಗೊತ್ತೇ ಇಲ್ಲ. ಅಪ್ಪನ ಪ್ರೀತಿಯೇ ಕಾಣದಂತೆ ಬೆಳೆದ ನನಗೆ ಅಪ್ಪ ಎಂದರೆ ಪ್ರೀತಿ ಬಂದೀತು ಹೇಗೆ? ಟಿ.ವಿಯವರು ಸುಮ್ಮನೆ ಅಪ್ಪನನ್ನು ವೈಭವೀಕರಿಸುತ್ತಿದ್ದಾರೆ ಎನಿಸಿತು.

ಇಂದು ಸಫಾಯಿ ಕರ್ಮಚಾರಿ ಎಂದು ಮರ್ಯಾದೆಯ ಪದ ಬಳಸುತ್ತಿರುವ ಕಾಯಕವನ್ನು ನಮ್ಮಪ್ಪ ಮಾಡುತ್ತಿದ್ದ. ಅರಸೀಕೆರೆಯ ಸುಭಾಷ್ ನಗರದ ಸಮೀಪದ ಗುಡಿಸಲುಗಳಲ್ಲಿ ನಾವು ವಾಸವಿದ್ದೆವು. ನಾನು ನನ್ನ ತಂಗಿ. ನಾವಿಬ್ಬರು ಮಕ್ಕಳು. ಹತ್ತು ಅಡಿ ಉದ್ದದ, ಹತ್ತು ಅಡಿ ಅಗಲದ ತಡಿಕೆಯ ಗುಡಿಸಲದು. ಒಂದು ಮೂಲೆಯಲ್ಲಿ ಮಣ್ಣಿನ ಒಲೆ ಅದರ ಪಕ್ಕದಲ್ಲೇ ಪೇರಿಸಿಟ್ಟ ಸೌದೆಯ ತುಂಡುಗಳು. ಮತ್ತೊಂದು ಮೂಲೆಯಲ್ಲಿ ಮುದುರಿ ನಡು ಮುರಿದು ನಿಂತಿದ್ದ ಹರಿದ ಚಾಪೆಗಳು. ಹತ್ತಾರು ತೂತುಗಳಿದ್ದ ಜಿಡ್ಡುಕಟ್ಟಿದ ಕರಿಯ ಕಂಬಳಿ, ಮುದುರಿ ಕಲ್ಲಿನಂತಾಗಿದ್ದ, ಆದರೆ ಅದರ ಮೇಲೆ ತಲೆ ಇಟ್ಟ ಕೂಡಲೇ ನಿದ್ದೆ ತರಿಸುತ್ತಿದ್ದ, ಕಮಟು ವಾಸನೆಯಿಂದ ಕೂಡಿದ್ದ ತಲೆದಿಂಬುಗಳು, ಸಂಜೆಯಾಗುತ್ತಲೇ ಸೀಮೆಎಣ್ಣೆ ಬುಡ್ಡಿ ಬೀರುವ ಬೆಳಕು. ಸಂಜೆ ಹೊತ್ನಲ್ಲಿ ಅವ್ವ ಹರಿದ ಸೀರೆಯ ಸೆರಗಿನಲ್ಲಿ ಕಟ್ಟಿಕೊಂಡು ಬಂದ ಅವರಿವರ ಮನೆಯ ತಿಂಡಿಯನ್ನೆಲ್ಲಾ ಒಟ್ಟಿಗೆ ಕಲೆಸಿ ಕೈ ತುತ್ತು